**ಇಂದು ದಿಃ27.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ವಕೀಲರಿಂದಃ**

ದಿನಾಂಕ 09.06.2023 ರಂದು ಅಪಘಾತವಾಗಿದೆ. 8 ತಿಂಗಳು 26 ದಿನ ತಡವಾಗಿ ಈ ಕೇಸು ಸಲ್ಲಿಸಿದ್ದೇವೆ ನನ್ನ ಪತ್ನಿ ಗರ್ಭಿಣಿಯಾಗಿದ್ದರಿಂದ ಅರ್ಜಿ ಸಲ್ಲಿಸಲು ತಡವಾಗಿದೆ. 2 ನೇ ಎದುರುದಾರರ ವಾಹನವನ್ನು ಅಪಘಾತ ಮಾಡಿರುವುದಾಗಿ ಸಿಲುಕಿಸಲು ತಡ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನ್ನ ಅಣ್ಣ ಮೋಹನ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಪ್ರ.ವ.ವ ಪ್ರಕಾರ ನನ್ನ ಹೇಳಿಕೆ ಮೇರೆಗೆ ದೂರು ದಾಖಲಿಸಲಾಗಿದೆ ಎಂದರೆ ಸರಿ. ಈ ಒಂದು ಪ್ರಕರಣವನ್ನು ದಾಖಲಿಸಲು ತಡವಾಗಿರುವುದರಿಂದ ಯಾರು ದೂರು ಸಲ್ಲಿಸಿದ್ದಾರೆ ಎಂಬು ವಿಚಾರ ಸರಿಯಾಗಿ ಗೊತ್ತಿಲ್ಲದೆ ತಪ್ಪು ತಪ್ಪು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಮೌಖಿಕ ಹೇಳಿಕೆಯನ್ನು ಪೊಲೀಸರು ಬರೆದುಕೊಂಡಿದ್ದಾರೆ. ನಿ.ಪಿ-3 ರ ಪ್ರಕಾರ ನಾನೇ ಪೊಲೀಸ್ ಠಾಣೆಗೆ ಲಿಖಿತ ದೂರು ಸಲ್ಲಿಸಿದ್ದೇನೆ ಎಂದರೆ ಸರಿ. ಅಪಘಾತವಾದ ನಂತರ ಚೆನ್ನರಾಯಪಟ್ಟಣದ ಪುಣ್ಯ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ಅದೊಂದೆ ಆಸ್ಪತ್ರೆಯಲ್ಲಿ 3 ದಿನ ಇದ್ದು ಪೂರ್ತಿ ಚಿಕಿತ್ಸೆ ಪಡೆದಿದ್ದೇನೆ. ಡಾ. ಮಹೇಶ ನನಗೆ ಚಿಕಿತ್ಸೆ ನೀಡಿದ್ದಾರೆ. ಆ ಆಸ್ಪತ್ರೆಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸದರಿ ಆಸ್ಪತ್ರೆಗೆ ಸಂಬಂಧಿಸಿದಂತೆ ಎಂ.ಎಲ್.ಸಿ ಹಾಜರುಪಡಿಸಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-4 ರಲ್ಲಿ ಯಾವ ಯಾವ ವಾಹನಗಳು ಅಪಘಾತದಲ್ಲಿ ಭಾಗಿಯಾಗಿವೆ ಎಂದು ಬರೆದಿಲ್ಲ ಎಂದರೆ ಸರಿ. ಆದ್ದರಿಂದ ಚಾರ್ಜ್ ಶೀಟ್ ನಲ್ಲಿ ನಮೂದಿಸಿರುವ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತ ಆದ ನಂತರ ಆ ವಾಹನವನ್ನು ನೋಡಿದ್ದೇನೆ ಆ ವಾಹನ ಸ್ಥಳದಲ್ಲಿ

ನಿಲ್ಲಿಸದೇ ಹೊರಟು ಹೋಯಿತು. ಮೆಡಿಕಲ್ ದಾಖಲೆಗಳಲ್ಲಿ ಅಪಘಾತಪಡಿಸಿದ ವಾಹನದ ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿ. ಹೊರರೋಗಿ ಚೀಟಿಯಲ್ಲಿ ದ್ವಿಚಕ್ರ ವಾಹನ ಹೊರತುಪಡಿಸಿ 4 ಚಕ್ರದ ವಾಹನ ನಮೂದಿಸಿಲ್ಲ ಎಂದರೆ ಸರಿ. 2 ನೇ ಎದುರುದಾರರ ವಾಹನ ನನಗೆ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. 23 BH 2417 Yamaha ಬೈಕ್ ನಲ್ಲಿ ಹೋಗುತ್ತಿದ್ದೆ ಅದು ನನ್ನದೆ. ನನ್ನ ಬೈಕ್ ನ ಇನ್ಸುರೆನ್ಸ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ದಿನ ನನಗೆ ಚಾಲನಾ ಪರವಾನಗಿ ಇರಲಿಲ್ಲ ಮತ್ತು ನನ್ನ ವಾಹನಕ್ಕೆ ವಿಮೆ ಇಲ್ಲದಿದ್ದ ಕಾರಣ ನ್ಯಾಯಾಲಯಕ್ಕೆ ವಿಮಾ ಪಾಲಿಸಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಗಿ ಇರಲಿಲ್ಲ ಮತ್ತು ವಾಹನ ಓಡಿಸಲು ಗೊತ್ತಿರಲಿಲ್ಲ ಆದ್ದರಿಂದ ನಾನೇ ಬಿದ್ದು ಗಾಯ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಯಾವುದೇ ಸಾಕ್ಷಿಗಳ ಹೇಳಿಕೆ ಮತ್ತು ಪೊಲೀಸರು ಕಲಂ 133 ರಲ್ಲಿ ಕೊಟ್ಟಿರುವ ನೋಟೀಸ ಪ್ರತಿ ಮತ್ತು ವಾಹನದ ಮಾಲೀಕರು ನೀಡಿರುವ ಉತ್ತರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಸಹ ಉದ್ಯೋಗ ಮುಂದುವರಿಸಿಕೊಂಡು ಹೋಗುತ್ತಿದ್ದೇನೆ ಎಂದರೆ ಸುಳ್ಳು. ನಾನು ಅರ್ಜಿಯಲ್ಲಿ ಹೇಳಿರುವಷ್ಟು ಆದಾಯ ಇರಲಿಲ್ಲ ಆದ್ದರಿಂದ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನನಗೆ ವಯಸ್ಸು 35 ವರ್ಷ ಆಗಿದೆ ಎಂದರೆ ಸರಿಯಲ್ಲ. ಆ ದಿನ ನಾನು ಹೆಲ್ಮೆಟ್ ಹಾಕಿರಲಿಲ್ಲ ಆದ್ದರಿಂದ ಮಹಜರ್ ಕಾಲಕ್ಕೆ ಹೆಲ್ಮೆಟ್ ಸಿಕ್ಕಿಲ್ಲ ಎಂದರೆ ಸುಳ್ಳು. 2 ನೇ ಎದುರುದಾರರ ನನಗೆ ಪರಿಚಯವಿರುವುದರಿಂದ ಪೊಲೀಸರೊಡನೆ ಸೇರಿ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರ ವಾಹನಕ್ಕೆ ಪರ್ಮಿಟ್ ಹಾಗೂ ಅರ್ಹತಾ ಪತ್ರ ಇರಲಿಲ್ಲ ಎಂದರೆ ಗೊತ್ತಿಲ್ಲ. ಆಪಾದಿತ ವಾಹನದ ಚಾಲಕನಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸುಳ್ಳು. ನಾನು ಮತ್ತು

2 ನೇ ಎದುರುದಾರ ಪೊಲೀಸರೊಡನೆ ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**